ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು):

ಅ) ಶ್ರೀ ಜಿ.ಎಸ್. ಪರಮಶಿವಯ್ಯನವರ ವರದಿಯಲ್ಲಿರುವಂತೆ ಮಾಲಾ ಕಾಲುವೆಗಳ ವೈಮಾನಿಕ ಸಮೀಕ್ಷೆ (ALTM-Airborne Laser Terrain Mapping) ಕೈಗೊಂಡಿತು, ಮೆ: ಎನ್.ಆರ್.ಎಸ್..ಸಿ. ಸಂಸ್ಥೆ, ಹೈದರಾಬಾದ್ ಇವರು 1ಮೀ. ಹಾಗೂ 5ಮೀ.ನ Contour Interval ಇರುವ ನಕ್ಷೆಗಳನ್ನು DEM (Digital Elevation Model), Orthophotosಗಳ ಸಾಫ್ಟ್ ಪ್ರತಿಗಳನ್ನು ನೀಡಿರುತ್ತಾರೆ.

ಆ) ಎನ್.ಆರ್.ಎಸ್.ಎ. ಸಂಸ್ಥೆಯು ಕೇವಲ ಸರ್ವೆ ಸಮೀಕ್ಷೆಯ ಮಾಹಿತಿ ಮಾತ್ರ ನೀಡಿರುತ್ತದೆ. ಯೋಜನೆಯ ಸೇವಾ ಕಾಲುವೆ ಸರ್ವೆ ಕಾರ್ಯವನ್ನು ಮೆ: ಎನ್.ಆರ್.ಎಸ್.ಸಿ. ಸಂಸ್ಥೆಯು ಮಾಡಿರುವುದಿಲ್ಲ. ಸೇವಾ ಕಾಲುವೆ ಸರ್ವೆ, ಸಮೀಕ್ಷೆಯನ್ನು ಕೈಗೊಳ್ಳಲು ಮತ್ತು ಈ ಸರ್ವೆ, ಸಮೀಕ್ಷೆ ಮಾಹಿತಿಯನ್ನು ಉಪಯೋಗಿಸಿ, ಯೋಜನೆಯ ವಿವರವಾದ ವರದಿ (Detailed Project Report-DPR)ಯನ್ನು ತಯಾರಿಸಲು ಟೆಂಡರ್ ಕರೆಯಲಾಗಿದೆ. ಯೋಜನೆಯ DPR ತಯಾರಾದ ಮೇಲೆ ಯೋಜನೆ ಪ್ರದೇಶದ ಸಂಪೂರ್ಣ ಮಾಹಿತಿ ಲಭ್ಯವಾಗುವುದರಿಂದ ಯೋಜನೆಯ ಸಾಧಕ – ಬಾಧಕಗಳ ಬಗ್ಗೆ ಅಧ್ಯಯನ ಮಾಡಲು ಸಾಧ್ಯವಾಗುವುದು. ನಂತರ ಈ ಕುರಿತ ಅಧ್ಯಯನ ನಡೆಸಲು ತಾಂತ್ರಿಕ ತಜ್ಞರ ಸಮಿತಿ ನೇಮಿಸಲಾಗುವುದು.

ಇ) ಮೆ: ಎನ್.ಆರ್.ಎಸ್.ಸಿ. ಸಂಸ್ಥೆ, ಹೈದರಾಬಾದ್ ಇವರು ನೀಡಿರುವ ಮಾಹಿತಿಗಳನ್ನಾಧರಿಸಿ, ವಿವರವಾದ ಯೋಜನಾ ವರದಿಯ ಮಾಹಿತಿಗಳನ್ನಾಧರಿಸಿ, ವಿವರವಾದ ಯೋಜನಾ ವರದಿಯ ತಯಾರಿಕೆಗೆ ಟೆಂಡರ್ ಕರೆಯಲಾಗಿದೆ. ವಿವರವಾದ ಯೋಜನಾ ವರದಿ ತಯಾರಾದ ಮೇಲೆ ಯೋಜನೆಯ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು.

ಹನೂರು ಪಟ್ಟಣದಲ್ಲಿ ಐ.ಟಿ.ಐ. ಕಾಲೇಜು ತೆರೆದಿರುವುದು.

12 (6) ಶ್ರೀ ನರೇಂದ್ರ. ಆರ್. (ಹನೂರು): ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಳ್ಳೇಗಾಲ ತಾಲ್ಲೂಕು ಹನೂರು ಪಟ್ಟಣವು ಅತಿ ಹೆಚ್ಚು ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗದ ಜನಾಂಗವನ್ನು ಹೊಂದಿದ್ದು, ಇಲ್ಲಿನ ವಿದ್ಯಾರ್ಥಿಗಳು ಐ.ಟಿ.ಐ. ತರಬೇತಿ ಪಡೆಯಲು ಯಾವುದೇ ಐ.ಟಿ.ಐ. ಕಾಲೇಜು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರ ಇಲ್ಲಿ ಐ.ಟಿ.ಐ. ಕಾಲೇಜು ತೆರೆಯಲು ಯೋಜನೆಯನ್ನೇನಾದರೂ ರೂಪಿಸಲಾಗಿದೆಯೇ;

ಇ) ಹಾಗಿದ್ದಲ್ಲಿ, ಎಂದು ಐ.ಟಿ.ಐ. ಕಾಲೇಜು ಮಂಜೂರು ಮಾಡಲಾಗುವುದು (ವಿವರ ನೀಡುವುದು)?

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು):

ಅ) ಹೌದು.

ಆ) ಇಲ್ಲ.

ಇ) ಅನುದಾನದ ಲಭ್ಯತೆ ಆಧರಿಸಿ ಹಂತಹಂತವಾಗಿ ಅವಶ್ಯಕತೆಯ ಮೇರೆಗೆ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಸ್ವಾಸ್ಥ್ಯ ವಿಮಾ ಯೋಜನೆಯ ಅನುಷ್ಠಾನ

13 (21) ಶ್ರೀ ಈಶ್ವರ್ ಬೀಮಣ್ಣ ಖಂಡ್ರೆ (ಬಾಲ್ಕಿ): ಮಾನ್ಯ ಕಾರ್ಮಿಕ ಮತ್ತು ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಸ್ವಾಸ್ಥ್ಯ ಬೀಮಾ ಯೋಜನೆಯನ್ನು ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗಿದೆ ಹಾಗೂ ಈ ಯೋಜನೆಯ ಉಪಯೋಗಗಳೇನು?

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಮತ್ತು ರೇಷ್ಮೆ ಸಚಿವರು):

ಅ) ರಾಜ್ಯದಲ್ಲಿ ರಾಷ್ಟ್ರೀಯ ಸ್ವಾಸ್ಥ್ಯ ಬೀಮಾ ಯೋಜನೆಯನ್ನು ಮೊದಲ ಹಂತದಲ್ಲಿ ಬೆಂಗಳೂರು ಗ್ರಾಮಾಂತರ, ದಕ್ಷಿಣ ಕನ್ನಡ, ಬೆಳಗಾವಿ, ಮೈಸೂರು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗಿದ್ದು, ಇನ್ನುಳಿದ ಜಿಲ್ಲೆಗಳಿಗೂ ಈ ಯೋಜನೆಯನ್ನು ವಿಸ್ತರಿಸಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

1) ರಾಷ್ಟ್ರೀಯ ಸ್ವಾಸ್ಥ್ಯ ಬೀಮಾ ಯೋಜನೆಯು ಬಿಪಿಎಲ್ ಕುಟುಂಬದ ಕಾರ್ಮಿಕರಿಗೆ ಆರೋಗ್ಯ ವಿಮೆ ಒದಗಿಸುವ ಯೋಜನೆಯಾಗಿರುತ್ತದೆ.

2) ಬಿಪಿಎಲ್ ಕುಟುಂಬದ ಮುಖ್ಯಸ್ಥ, ಪತ್ನಿ ಮತ್ತು ಮೂರು ಜನ ಅವಲಂಬಿತರು (ಮಕ್ಕಳು ಸೇರಿದಂತೆ) ಒಟ್ಟು 5 ಮಂದಿ ವಾರ್ಷಿಕವಾಗಿ ರೂ.30,000/ ವರೆಗೆ ಒಳರೋಗಿಯಾಗಿ ವೈದ್ಯಕೀಯ / ಚಿಕಿತ್ಸೆ ಸೌಲಭ್ಯಗಳನ್ನು ಪಡೆಯಲು ಅರ್ಹರಿರುತ್ತಾರೆ.